(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

(ಪ್ರಶಾಂತಿ.ಜಿ)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.

ದಿ:**18-02-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟಿಸವಾಲು : ಅರ್ಜಿದಾರರ ಪರ ಶ್ರೀ. ಆರ್.ಸಿ.ಎಸ್ ವಕೀಲರಿಂದ :

67. ನನ್ನ ತಂದೆ 1963-64 ನೇ ಇಸವಿಯಲ್ಲಿ ಮದುವೆಯಾಗುವ ಸಂದರ್ಭದಲ್ಲಿ ಹಂಚಿನ ಮನೆಯಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ. ಸ್ವತ್ತು ನಂ.9/1 ರಲ್ಲಿ ಹಂಚಿನ ಮನೆ ಇತ್ತು ಎಂದರೆ ಸರಿ. ಸದರಿ ಹಂಚಿನ ಮನೆಯಲ್ಲಿ 1995 ರವರೆಗೂ ವಾಸವಾಗಿದ್ದೆವು. ನನ್ನ ಮದುವೆಗೋಸ್ಕರ ಸದರಿ ಮನೆಯಿಂದ ಹೊರಗೆ ಹೋದೆವು. ಹಂಚಿನ ಮನೆಯಲ್ಲಿ ಇದ್ದರೆ ಕಷ್ಟ ಆಗುತ್ತದೆ ಮತ್ತು ಹುಡುಗಿಯನ್ನು ಕೊಡುವುದಿಲ್ಲ ಎಂಬ ಕಾರಣಕ್ಕಾಗಿ ಬೇರೆ ಮನೆಗೆ ಹೋದೆವು ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಮತ್ತು ನನ್ನ ತಂದೆಯನ್ನು ಕೇಳಬೇಕು ಎಂದು ನುಡಿಯುತ್ತಾರೆ.

68. ನಿ.ಆರ್.14 ಯಾವ ದಾಖಲೆ ಎಂದು ನನ್ನ ವಕೀಲರನ್ನು ಕೇಳಬೇಕು. ನಿ.ಆರ್.14 ನ್ನು ನಾನೇ ತೆಗೆದುಕೊಂಡು ಬಂದಿದ್ದೇನೆ. ನಿ.ಆರ್.14 ನ್ನು ನನಗೆ ಓದಲು ಆಗುವುದಿಲ್ಲ.

69. ಸರ್ವೇ ನಂ.8, ಹಿರೇಹಳ್ಳಿ ಗ್ರಾಮ, Urdigere ಹೋಬಳಿ, ತುಮಕೂರು ತಾಲೂಕು ನನ್ನ ತಂದೆ ನನ್ನ ತಾಯಿ ಹೆಸರಿನಲ್ಲಿ ಖರೀದಿಸಿದ ಸ್ಥಳ. ಅದನ್ನು ಯಾವಾಗ ಖರೀದಿಸಿದ್ದರು ಎಂದು ನನಗೆ ನೆನಪಿಲ್ಲ. ಅದೇ ರೀತಿ ಸದರಿ ಆಸ್ತಿಗೆ ಎಷ್ಟು ಮೌಲ್ಯವನ್ನು ನೀಡಲಾಗಿತ್ತು ಎಂದೂ ಸಹ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಸರ್ವೇ ನಂ.8 ರ ಬಗ್ಗೆ ನಾನು ಬರೆದಿದ್ದೇನೆ. ಸರ್ವೇ ನಂ.8 ರ ಬಗ್ಗೆ ಯಾವುದಾದರೂ ದಾಖಲಾತಿಗಳನ್ನು ಹಾಜರುಪಡಿಸಿದ್ದೇನಾ ಎಂದು ನನಗೆ ನೆನಪಿಲ್ಲ. ಅದನ್ನು ಖರೀದಿಸಿದ ನಂತರ ಅದಕ್ಕೆ ಕಂದಾಯವನ್ನು ನನ್ನ ತಂದೆ ಕಟ್ಟುತ್ತಿದ್ದರು ಈಗ ನಾನು ಕಟ್ಟುತ್ತಿದ್ದೇನೆ. ನನ್ನ ತಂದೆ ತೀರಿಹೋದ ನಂತರ ನಾನು ಅದಕ್ಕೆ ಕಂದಾಯ ಕಟ್ಟುತ್ತಿದ್ದೇನೆ. ಸರ್ವೇ ನಂ.8 ಆರ್.ಟಿ.ಸಿ ಹಾಗೂ ಖಾತಾ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿ ನನಗೆ ಗಲಿಬಿಲಿಯಾಗುತ್ತಿದೆ ಎಂದು ನುಡಿಯುತ್ತಾರೆ.

(ಮುಂದುವರಿದ ಪಾಟಿ ಸವಾಲಿಗೆ ಸಾಕ್ಷಿ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

(ಪ್ರಶಾಂತಿ.ಜಿ)
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**